

ಲಿಂಬು, ಕಿತ್ತಳೆ ಮುಂತಾದ ಪೊಗದಸ್ತಾಗಿ ಬೆಳೆದ ಫಲಭರಿತ ಗಿಡಗಳು ನಮ್ಮೊಂದಿಗೆ ಮಾತಿಗಿಳಿಯುತ್ತವೆ. ಇವೆಲ್ಲ ಹತ್ತು ವರ್ಷದೊಳಗಿನ ಹಣ್ಣಿನ ಗಿಡಗಳು. ಮಾವು, ದಾಳಿಂಬೆ, ಚಿಕ್ಕು, ಪೇರಳೆ ಗಿಡಗಳಂತೂ ಹಣ್ಣುಗಳ ಭಾರದಿಂದ ತೂಗುತ್ತಿದ್ದವು. ಮಾವಿನಲ್ಲಿ ಕೇಸರ್ ಮತ್ತು ಆಲ್ಫೋನ್ಸ (ಆಪೂಸ್) ತಳಿಗಳು ಪ್ರಮುಖ. ಚಿಕ್ಕುವಿನಲ್ಲಿ ಕಾಲಬತ್ತಿ, ಕ್ರಿಕೆಟ್ ಬಾಲ್ ಜಾತಿಯ ತಳಿಗಳು ಹೇರಳವಾಗಿದ್ದವು.

ಇನ್ನೊಂದೆಡೆ ಪ್ಲಾಂಟೇಶನ್ ಹೆಸರಲ್ಲಿ ನೆಟ್ಟ ತೇಗ, ಹೆಬ್ಬೇವು, ಶ್ರೀಗಂಧದ ಗಿಡಗಳು ಸಮೃದ್ಧವಾಗಿ ಬೆಳೆದು ನಿಂತಿವೆ. ಅಲ್ಲಲ್ಲಿ ತಾವಾಗಿ ಬೆಳೆದು ನಿಂತ ದಟ್ಟ ಹಸುರಿನ ಬೇವಿನ ಮರಗಳಿಗೆ ಲೆಕ್ಕವೇ ಇಲ್ಲ. 2500 ದಾಳಿಂಬೆ ಗಿಡಗಳು, ಪೇರಳೆ 1100, ಕಿನೊ 300, ಮಾವು 200, ನೇರಳೆ 100, ಚಿಕ್ಕು 50, ಲಿಂಬೆ 200, ತೇಗ 2000, ಹೆಬ್ಬೇವು 2500, ಶ್ರೀಗಂಧ 500– ಹೀಗೆ



ದಾಳಿಂಬೆ ತೋಟದಲ್ಲಿ ತಂದೆಯೊಂದಿಗೆ ಯುವ ಕೃಷಿಕ ಸಂತೋಷ್

ಜತೆಗಿದ್ದ ಸಂತೋಷ್ ಗಿಡಗಳ ಲೆಕ್ಕ ಕೊಡುವಾಗ ನಾನು ದಂಗಾದೆ. ಕಳೆದ ವರ್ಷ ಕಲ್ಲಂಗಡಿಯನ್ನು ಬೆಳೆಸಿದರೆ ಈ ಸಲ ಮೆಣಸಿನಗಿಡಗಳನ್ನು ಹಾಕಿ ಕಳೆ ಬೆಳೆಯದಂತೆ ಮಲ್ಚಿಂಗ್ಶೀಟ್ ಹೊದಿಸಿದ್ದಾರೆ. 'ಐದು ಎಕರೆ ಜಮೀನಿನಲ್ಲಿ ಗೋಡಂಬಿ ಹಾಕುವ ಯೋಜನೆ ಇದೆ. ಹೊಸದಾಗಿ ತೋಡಿದ ಕೃಷಿಹೊಂಡದ ಮೇಲ್ಭಾಗದ ಇಳಿಜಾರಿನಲ್ಲಿ ನೀರಾವರಿ ತೊಗರಿ ಬೆಳೆಯುವ ತಯಾರಿಯಲ್ಲಿದ್ದೇನೆ' ಎನ್ನುತ್ತಾರೆ ಸಂತೋಷ್.

'ಕಲ್ಲುಮಿಶ್ರಿತ ಕೆಂಪು ಮಣ್ಣಿನ ತುಸು ಇಳಿಜಾರಿನ ಭೂಮಿ ಹಣ್ಣಿನ ಬೆಳೆಗೆ ಉತ್ಕೃಷ್ಟ' ಎನ್ನುತ್ತಾರೆ ಸಂತೋಷ್, ಅಂತಹ ನೆಲದಲ್ಲಿ ನೀರು ನಿಲ್ಲದೆ ತೇವಾಂಶ ತುಂಬಿರುತ್ತದೆ. ದಾಳಿಂಬೆ ಬೆಳೆ ಕೈಗೆ ಬರುವ ಈ ಹೊತ್ತಿನಲ್ಲಿ ಹೂ ಬಿಟ್ಟಾಗಿನಿಂದ ಅದರ ಆರೈಕೆ ಗರ್ಭಿಣಿ ಸ್ತ್ರೀಯರಿಗೆ ತೋರಿಸುವ ಮುತುವರ್ಜಿಯಂತಿರಬೇಕು ಎಂದು ಹೇಳಲು ಅವರು ಮರೆಯಲಿಲ್ಲ. ವರ್ಷಕ್ಕೆ ನಾಲ್ಕೈದು ಸಲ ನಿಯಮಿತವಾಗಿ ಹಣ್ಣಿನ ಗಿಡಗಳಿಗೆ ಗೊಬ್ಬರ ಕೊಡುತ್ತಾರೆ. ಹಣ್ಣು ಬಿಡುವ ಸಂದರ್ಭದಲ್ಲಿ ಕೀಟನಾಶಕವನ್ನು ಮಿತವಾಗಿ ಅದರ ಪ್ರಭಾವ ಹಣ್ಣಿನಲ್ಲಿ ಉಳಿಯದ ರೀತಿಯಲ್ಲಿ ಬಳಸಬೇಕೆನ್ನುವ ಎಚ್ಚರವೂ ಅವರಿಗಿದೆ. 'ಕೀಟನಾಶಕದ ಅಂಶ ಹೂ ಹಣ್ಣಿನಲ್ಲಿದ್ದರೆ ಈ ರೀತಿಯಾಗಿ ಜೇನ್ನೊಣಗಳು ಮುತ್ತುವುದಿಲ್ಲ' ಎಂದು ಅಲ್ಲಿ ಹಾರಾಡುತ್ತಿದ್ದ ಜೇನ್ನೊಣಗಳನ್ನು ತೋರಿಸಿದರು.

ಗಿಡಗಳಿಗೆ ಹಟ್ಟಿ ಗೊಬ್ಬರವನ್ನು ಬಳಸುವುದರ ಜೊತೆಗೆ ತಾವೇ ತಯಾರಿಸಿದ ಜೀವಾಮೃತವನ್ನೂ ಹಾಕುತ್ತಾರೆ. ಅಲ್ಲದೆ ಗಿಡಗಳ ಬುಡದಲ್ಲಿ ಉದುರಿದ ಎಲೆಗಳೇ ಕೊಳೆತು ಸಹಜ ಗೊಬ್ಬರವಾಗುತ್ತಿದೆ. ಹಣ್ಣಿನ ಗಿಡಗಳು ಪೊದೆಯಾಗಿ ಬೆಳೆಯಲು, ಚಿಗುರಿ ಗುಣಮಟ್ಟದ ಹೂ ಬಿಡಲು ಆಗಾಗ್ಗೆ ಸವರುವಿಕೆ (Pruning) ಮಾಡುತ್ತಾರೆ. ಅಲ್ಲೆಲ್ಲ ಸುತ್ತಾಡಿದ ನಮಗೆ ಸುತ್ತಲಿನ ಬೆಟ್ಟಗಳಲ್ಲಿ ನವಿಲುಗಳ ದರ್ಶನದೊಂದಿಗೆ ಅವುಗಳ ಕೇಕೆ ಕೇಳಿಬಂದರೆ, ತೋಟದಲ್ಲಿ ನಾನಾ ಜಾತಿಯ ಪಕ್ಷಿಗಳು, ಅಳಿಲು, ಚಿಟ್ಟೆಗಳ ಸಮೂಹ ಬೀಡುಬಿಟ್ಟದ್ದು ಕಂಡುಬಂತು.

ಸುಮಾರು 40 ಎಕರೆ ಜಮೀನಿನಲ್ಲಿ 25 ಎಕರೆ ಭೂಮಿಯನ್ನು ತೋಟಗಾರಿಕೆ ಕೃಷಿ ಮತ್ತು ಪ್ಲಾಂಟೇಶನ್ ಗಿಡಗಳಿಗೆ ಮೀಸಲಿಟ್ಟರೆ, 5 ಎಕರೆ ಕೇವಲ ಕೃಷಿ ಹೊಂಡ ಮತ್ತು ಒಡ್ಡುಗಳಿಗೆ ಬಳಕೆಯಾಗಿದೆ. ಭೌಗೋಳಿಕವಾಗಿ ತಗ್ಗಿನಲ್ಲಿರುವ ಕೃಷಿ ಭೂಮಿಯ ಲಾಭವನ್ನು ಇವರು ಸರಿಯಾಗಿ ಬಳಸಿಕೊಂಡಿದ್ದಾರೆ. ನೀರಿಲ್ಲದ ನೆಲೆಯಲ್ಲಿ ಇವತ್ತು ಕೃಷಿಗೆ, ನಿತ್ಯ ಬಳಕೆಗೆ ಸಾಕಾಗುವಷ್ಟು ನೀರನ್ನು ಸಂಗ್ರಹಿಸಿ ಇಡುವಂತಹ ತಮ್ಮ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದ್ದಾರೆ. ಮಳೆನೀರು ಸಂಗ್ರಹಕ್ಕೂ, ಮಳೆಗಾಲದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರು ನೆಲದಲ್ಲೇ ಇಂಗುವುದಕ್ಕೂ ಒತ್ತುಕೊಟ್ಟ ಇವರ ಸಾಧನೆ ಮೆಚ್ಚುವಂತಿದೆ. ಗುಡ್ಡಗಳಲ್ಲಿ ಒರತೆಯಾಗಿ ಹರಿಯುವ ನೀರನ್ನು ತೋಡಿದ ಹೊಂಡಗಳಲ್ಲಿ ಸೆರೆ ಹಿಡಿಯುವುದಲ್ಲದೆ ಮಳೆಗಾಲದಲ್ಲಿ ಎತ್ತರದ ಪ್ರದೇಶಗಳಿಂದ ಕುರಿ ಹಿಕ್ಕೆ, ಒಣಗಿದ ಎಲೆಗಳ ಸಾರವನ್ನು ಹೊತ್ತುಕೊಂಡು ಕೆಳಗೆ ಹರಿಯುವ ನೀರು ಜಮೀನಿನ ಸುತ್ತ ತೋಡಿರುವ ಬೃಹತ್ ಹೊಂಡಗಳಲ್ಲಿ ತುಂಬುವಂತಹ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ.

ಆರು ದೊಡ್ಡ ಕೃಷಿ ಹೊಂಡಗಳ ಜೊತೆಗೆ ತೋಡಿಸಿದ ಎಂಟು ಕೊಳವೆ ಬಾವಿಗಳು ಕೃಷಿಗೆ ಸಹಕಾರಿಯಾಗಿವೆ. ಕೊಳವೆ ಬಾವಿಗಳು 50–60 ಅಡಿಗಳ ಆಳ ಕಂಡಿದ್ದರೆ, ಅದರ ಸುತ್ತಲೂ ಜಲ ಮರುಪೂರಣಕ್ಕೆ ಇಂಗುಗುಂಡಿಗಳನ್ನು ತೋಡುವ ಅಂದಾಜಿನಲ್ಲಿದ್ದಾರೆ. ಮಿತವ್ಯಯದ ದೃಷ್ಟಿಯಿಂದ ಎಲ್ಲೆಡೆ ಹನಿ ನೀರಾವರಿಯನ್ನು ಅಳವಡಿಸಿಕೊಂಡಿದ್ದಾರೆ.

'ಮಾರುಕಟ್ಟೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಏರಿಳಿತ ಕಾಣುವ ಹಣ್ಣಿನ ಬೆಲೆ ಇಂದು ಬೆಳೆಗಾರ ಎದುರಿಸುವ ದೊಡ್ಡ ಸವಾಲು' ಎನ್ನುವುದು ಸಂತೋಷ್ ಅವರ ಅನಿಸಿಕೆ. ಈ ಸಲ ಮಾವಿಗೆ ಬೆಲೆಯೇ ಬಂದಿಲ್ಲ ಎನ್ನುವ ಹತಾಶೆ ಅವರಲ್ಲಿತ್ತು. ಕಾರ್ಮಿಕರ ಸಮಸ್ಯೆ ತಮ್ಮನ್ನು ಇದುವರೆಗೆ ಕಾಡಿಲ್ಲ ಎನ್ನುವ ಸಂತೋಷ್, ಹಣ್ಣುಗಳನ್ನು ಕೆಲವೊಮ್ಮೆ ಗುತ್ತಿಗೆ ಆಧಾರದಲ್ಲಿ ಮಾರಾಟ ಮಾಡಿದ್ದಾರೆ. ಬೆಲೆ ಚೆನ್ನಾಗಿದ್ದ ಸಮಯದಲ್ಲಿ ಹಣ್ಣುಗಳನ್ನು ಇಳಿಸಿ ಸ್ವತಃ ತಾವೇ ಮಾರಾಟ ಮಾಡಿದ ಸಂದರ್ಭಗಳೂ ಇವೆ. ಗಿಡಗಳು ನಿರೀಕ್ಷೆಯಂತೆ ಗುಣಮಟ್ಟದ ಹಣ್ಣುಗಳನ್ನು ಬಿಟ್ಟರೆ ತಾವೇ ಕಿತ್ತು ಗ್ರೇಡಿಂಗ್ ಮತ್ತು ಪ್ಯಾಕಿಂಗ್‌ಗೆ ಹೊರಗುತ್ತಿಗೆಗೆ ಕೊಡುವ ಅವಕಾಶದ ಸುಳಿವನ್ನೂ ಬಿಚ್ಚಿಟ್ಟರು. ಬೆಳೆದ ಹಣ್ಣುಗಳು ಕೈಸೇರಿ ಒಳ್ಳೆಯ ಬೆಲೆ ಬರುವವರೆಗಿನ ಆತಂಕ ಇಂದಿನ ಕೃಷಿಕನಲ್ಲಿ ಸಾಮಾನ್ಯ ಎನ್ನುವ ನೋವು ಅವರ ಮಾತಿನಲ್ಲಿತ್ತು.

ಕಳೆದ ವರ್ಷಗಳಲ್ಲಿ ಮಾವು ಮತ್ತು ಕಲ್ಲಂಗಡಿ ಹಣ್ಣುಗಳು ಹೆಚ್ಚಿನ ಪ್ರಮಾಣದಲ್ಲಿ ಇವರ ತೋಟದಿಂದ ವಿದೇಶಕ್ಕೆ ರಫ್ತಾಗಿವೆ. ಕೃಷಿಗೆ ಒದಗಿ ಬರುವ ಸರಕಾರದ ಸವಲತ್ತುಗಳನ್ನು ಸಮರ್ಪಕವಾಗಿ ಬಳಸಿದ ಇವರ ಮನಸ್ಸಿನಲ್ಲಿ ಹಣ್ಣುಗಳನ್ನು ಕೆಲಕಾಲ ಕೆಡದಂತೆ ಇಡುವ ಚಿಕ್ಕ ಶೈತ್ಯಾಗಾರದ ಕನಸೂ ಇದೆ.

ತೋಟಗಾರಿಕೆ ಕೃಷಿಯಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಸಾಕಷ್ಟು ಅನುಭವ ಪಡೆದ ಇವರ ಮಾರ್ಗದರ್ಶನವನ್ನು ಸುತ್ತಲಿನ ರೈತರೂ ಪಡೆದುಕೊಳ್ಳುತ್ತಿದ್ದಾರೆ. ಇವರ ಕೃಷಿಯ ಯಶೋಗಾಥೆಗೆ ಸಾಕಷ್ಟು ಮಂದಿ ಪ್ರೇರೇಪಿತರಾಗಿದ್ದಾರೆ. ಇವರ ಸಾಧನೆಗೆ 2018 ಮಾರ್ಚ್‌ನಲ್ಲಿ ನಡೆದ ಕೊಪ್ಪಳ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ 'ಕೃಷಿ ಸಾಧಕ ಪ್ರಶಸ್ತಿ' ಸಂದಿದೆ. ಸಂತೋಷ್ ಅವರನ್ನು ಮೊಬೈಲ್ 99004 44733 ಮೂಲಕ ಸಂಪರ್ಕಿಸಬಹುದು.